# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **458**

ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 19-08-2026

ಉತ್ತರಿಸುವ ಸಚಿವರು : ಇಂಧನ ಮತ್ತು ಪ್ರವಾಸೋದ್ಯಮ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ 15 ಜಿಲ್ಲೆಗಳಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆಯ ಜವಾಬ್ದಾರಿಯನ್ನು 'ದಿ ಟಾಟಾ ಪವರ್' ಕಂಪನಿಯಂತಹ ಖಾಸಗಿ ಸಂಸ್ಥೆಗಳಿಗೆ ವಹಿಸಲು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ (KERC) ಅರ್ಜಿ ಸಲ್ಲಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರದ ನಿಲುವೇನು; | ಬಂದಿರುತ್ತದೆ. |
| ಆ) | ವಿದ್ಯುತ್ ವಿತರಣೆ ಖಾಸಗೀಕರಣದಿಂದಾಗಿ ರೈತರಿಗೆ ನೀಡಲಾಗುತ್ತಿರುವ ಉಚಿತ ವಿದ್ಯುತ್ (ಐ.ಪಿ. ಸೆಟ್ ಗಳು) ಹಾಗೂ ಸಾರ್ವಜನಿಕರಿಗೆ ನೀಡಲಾಗುತ್ತಿರುವ ಗೃಹಜ್ಯೋತಿ' ಯೋಜನೆಯ ಉಚಿತ ವಿದ್ಯುತ್ ಸರಬರಾಜಿಗೆ ಧಕ್ಕೆಯಾಗಲಿದೆ ಎಂಬ ಸಾರ್ವಜನಿಕರು, ರೈತರು ಮತ್ತು ನೌಕರರ ಆತಂಕಕ್ಕೆ ಸರ್ಕಾರ ಯಾವ ಕ್ರಮವಹಿಸಲಿದೆ; | ದಿನಾಂಕ:03.07.2026 ರಂದು **ಮೆ\|\| ಟಾಟಾ ಪವರ್** ಕಂಪನಿಯವರು ಮಾನ್ಯ ಕೆ.ಇ.ಆರ್.ಸಿ ರವರಿಗೆ ಸಲ್ಲಿಸಿರುವ ಅರ್ಜಿಯನ್ನು ಹಿಂಪಡೆದಿರುತ್ತಾರೆ. ಆದ್ದರಿಂದ ರಾಜ್ಯದಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆಯು ಖಾಸಗೀಕರಣದ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲ. |
| ಇ) | ರಾಜ್ಯದ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ (ಎಸ್ಕಾಂಗಳಲ್ಲಿ) ಮಂಜೂರಾದ ಒಟ್ಟು 87,644 ಹುದ್ದೆಗಳ ಪೈಕಿ 52,251 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು, ಇನ್ನುಳಿದ 35,000ಕ್ಕೂ ಹೆಚ್ಚು ಖಾಲಿ ಹುದ್ದೆಗಳಿಂದಾಗಿ ವಿದ್ಯುತ್ ನಿರ್ವಹಣೆಯಲ್ಲಿ ಉಂಟಾಗುತ್ತಿರುವ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕವಿಪ್ರನಿನಿ ಹಾಗೂ ಎಸ್ಕಾಂಗಳಲ್ಲಿ ಗುಂಪು-ಡಿ ವೃಂದದ ಸುಮಾರು 20000 ಕ್ಕೂ ಅಧಿಕ ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡದೆ ಹೊರ ಗುತ್ತಿಗೆ ಮೂಲಕ ಭರ್ತಿ ಮಾಡುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/137/ಈಕಾಅ/2005, ದಿನಾಂಕ: 26.07.2005 ರಲ್ಲಿ ತಿಳಿಸಿರುವುದರಿಂದ, ಈ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶವಿರುವುದಿಲ್ಲ.<br><br>ಈ ಹಿಂದೆ ನಿಗಮದ ದಿನಾಂಕ: 14.10.2024 ರ ಉದ್ಯೋಗ ಪ್ರಕಟಣೆಯ ಅನ್ವಯ ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ಕಿರಿಯ ಪವರ್ ಮ್ಯಾನ್ ಮತ್ತು ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆಗಳಿಗೆ ನಡೆಸಲಾದ ನೇಮಕಾತಿ ಪ್ರಕ್ರಿಯೆಯು ಪೂರ್ಣಗೊಂಡಿದ್ದು, ಆಯ್ಕೆಗೊಂಡ 2,826 ಅಭ್ಯರ್ಥಿಗಳ ಪೈಕಿ, 880 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಜಾರಿಗೊಳಿಸಲಾಗಿದ್ದು, ಇನ್ನುಳಿದಂತೆ 1,946 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. |

<table>
<tr>
<td></td>
<td></td>
<td>ಮುಂದುವರೆದಂತೆ, ಪ್ರಸ್ತುತ ಖಾಲಿ ಇರುವ ಅವಶ್ಯಕ ಹುದ್ದೆಗಳಾದ 1,000- ಕಿರಿಯ ಪವರ್ ಮ್ಯಾನ್ ಮತ್ತು 200- ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ/415/ವೆಚ್ಚ-1/2025, ದಿನಾಂಕ: 15.06.2026 ರಲ್ಲಿ ಅನುಮೋದನೆ ನೀಡಿರುತ್ತದೆ. ಸದರಿ ಹುದ್ದೆಗಳ ನೇಮಕಾತಿ ಅಧಿಸೂಚನೆ ಹೊರಡಿಸುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ.<br><br>ಇದಲ್ಲದೆ, ಅವಶ್ಯಕ ಹುದ್ದೆಗಳನ್ನು ಭರ್ತಿ ಮಾಡಲು ಕಾಲಕಾಲಕ್ಕೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ. ಮೇಲೆ ವಿವರಿಸಿದ ಹಿನ್ನಲೆಯಲ್ಲಿ, ವಿದ್ಯುತ್ ಸರಬರಾಜು ನಿರ್ವಹಣೆಯಲ್ಲಿ ಯಾವುದೇ ಸಮಸ್ಯೆಗಳು ಬಾರದಂತೆ ಕ್ರಮ ಕೈಗೊಳ್ಳಲಾಗಿರುತ್ತದೆ.</td>
</tr>
<tr>
<td>ಈ)</td>
<td>ವಿವಿಧ ಸರ್ಕಾರಿ ಇಲಾಖೆಗಳಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬರಬೇಕಾದ ಬಾಕಿ ಮೊತ್ತ ಎಷ್ಟು: ಈ ಬಾಕಿಯನ್ನು ವಸೂಲಿ ಮಾಡಲು ಮತ್ತು ಎಸ್ಕಾಂಗಳನ್ನು ಆರ್ಥಿಕ ನಷ್ಟದಿಂದ ಹೊರತರಲು ಸರ್ಕಾರ ರೂಪಿಸಿರುವ ಯೋಜನೆಗಳೇನು? (ವಿವರ ನೀಡುವುದು);</td>
<td>ವಿವಿಧ ಸರ್ಕಾರಿ ಇಲಾಖೆಗಳು / ಸಂಸ್ಥೆಗಳು ವಿದ್ಯುತ್ ಸರಬರಾಜು ಕಂಪನಿಗಳಿಗೆ ಜೂನ್-2026 ರ ಅಂತ್ಯಕ್ಕೆ ಪಾವತಿಸಬೇಕಾಗಿರುವ ಬಾಕಿ ಮೊತ್ತದ ವಿವರಗಳು.<br><br>
<table>
<tr><th>ಕಂಪನಿ</th><th>ಬಾಕಿ ಮೊತ್ತ (ರೂ.ಕೋಟಿಗಳಲ್ಲಿ)</th></tr>
<tr><td>ಬೆಸ್ಕಾಂ</td><td>6973</td></tr>
<tr><td>ಸೆಸ್ಕ್</td><td>1409</td></tr>
<tr><td>ಹೆಸ್ಕಾಂ</td><td>2198</td></tr>
<tr><td>ಜೆಸ್ಕಾಂ</td><td>2215</td></tr>
<tr><td>ಮೆಸ್ಕಾಂ</td><td>870</td></tr>
<tr><td>ಹುಕ್ಕೇರಿ</td><td>32</td></tr>
<tr><td>ಒಟ್ಟು</td><td>13697</td></tr>
</table>
<br>ವಿವಿಧ ಸರ್ಕಾರಿ ಇಲಾಖೆಗಳು / ಸಂಸ್ಥೆಗಳು ವಿದ್ಯುತ್ ಸರಬರಾಜು ಕಂಪನಿಗಳಿಗೆ ಮಾರ್ಚ್-2025 ರ ಅಂತ್ಯಕ್ಕೆ ಪಾವತಿಸಬೇಕಾಗಿರುವ ಬಾಕಿ ಮೊತ್ತ ರೂ.9097 ಕೋಟಿ ಮೊತ್ತವನ್ನು ಸರ್ಕಾರದ ವತಿಯಿಂದ ಒಂದು ಬಾರಿ ಕ್ರಮವಾಗಿ (One Time Measure) ಪಾವತಿಸಲು ಹಾಗೂ ಸಕಾಲದಲ್ಲಿ ಶೇ.100 ವಿದ್ಯುತ್ ಶುಲ್ಕವನ್ನು ಪಾವತಿಸಲು ಸಾಧ್ಯವಾಗುವಂತೆ ಎಲ್ಲಾ ಸರ್ಕಾರಿ ಇಲಾಖೆಗಳಿಗೆ ಸಾಮಾನ್ಯವಾಗಿ ಮತ್ತು ನಿರ್ದಿಷ್ಟವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಅನುದಾನವನ್ನು ಹಂಚಿಕೆ ಮಾಡಿ ಒದಗಿಸುವ ಬಗ್ಗೆ ಕರಡು ಸಚಿವ ಸಂಪುಟ ಟಿಪ್ಪಣಿಯನ್ನು ಪ್ರಸ್ತಾವನೆಯ ಕಡತವನ್ನು ದಿನಾಂಕ: 30.06.2025 ರಂದು ಆರ್ಥಿಕ ಇಲಾಖೆಗೆ ಪ್ರಸ್ತಾಪಿಸಲಾಗಿದೆ.<br><br>ಮತ್ತೊಮ್ಮೆ ವಿವಿಧ ಸರ್ಕಾರಿ ಇಲಾಖೆಗಳು / ಸಂಸ್ಥೆಗಳು ವಿದ್ಯುತ್ ಸರಬರಾಜು ಕಂಪನಿಗಳಿಗೆ ಮಾರ್ಚ್-2026 ರ ಅಂತ್ಯಕ್ಕೆ ಪಾವತಿಸಬೇಕಾಗಿರುವ ಬಾಕಿ ಮೊತ್ತ ರೂ.12631 ಕೋಟಿ ಮೊತ್ತವನ್ನು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸುವ ನಿಟ್ಟಿನಲ್ಲಿ ಹಣ ಬಿಡುಗಡೆ ಮೂಲಕ ಅಥವಾ ಸರ್ಕಾರಿ ಖಾತರೀಕರಣದಡಿಯಲ್ಲಿ ತೀರುವಳಿಗೊಳಿಸಲು ಕೋರಿ ಇಂಧನ ಇಲಾಖೆಯಿಂದ ಪ್ರಸ್ತಾವನೆಯ ಕಡತವನ್ನು ದಿನಾಂಕ: 20.06.2026 ರಂದು ಆರ್ಥಿಕ ಇಲಾಖೆಗೆ ಪ್ರಸ್ತಾಪಿಸಲಾಗಿದೆ.</td>
</tr>
</table>

| | | |
|---|---|---|
| | | ಇಂಧನ ಇಲಾಖೆಯಿಂದ ತ್ರೈಮಾಸಿಕವಾಗಿ ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರೊಂದಿಗೆ ನಿಯಮಿತವಾಗಿ ಪತ್ರ / ಅರೆ ಸರ್ಕಾರಿ ಪತ್ರ ಮುಖಾಂತರ ವಿದ್ಯುತ್ ಬಾಕಿ ಮೊತ್ತವನ್ನು ಪಾವತಿಸಲು ಕೋರಲಾಗಿರುತ್ತದೆ. |

ಸಂಖ್ಯೆ: ಎನರ್ಜಿ 215 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಮತ್ತು ಪ್ರವಾಸೋದ್ಯಮ ಸಚಿವರು